ವಿಷಯ.—ಸಹಕಾರ ಸಂಘಗಳ ವಿಕೇಂದ್ರೀಕರಣ ವಿಷಯ.

೫೦. (೪೪) ಶ್ರೀ ಬಿ. ಬೈರಪ್ಪಾಜಿ (ಕುರುವೇಕೆರೆ) ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿನ ಪ್ರಾಥಮಿಕ ಸಹಕಾರಿ ಸಂಘಗಳ ಸಂಖ್ಯೆಯು ಅವುಗಳನ್ನು ಒಂದುಗೂಡಿಸುವ ಕಾರಣದಿಂದಾಗಿ ಅತಿ ಕಡಿಮೆಯಾಗಿರುವುದು ಸರ್ಕಾರದಪರಿಗೆ ಗೊತ್ತಿದೆಯೇ ;

(ಆ) ಹಾಗಿದ್ದಲ್ಲಿ ಈ ಒಂದು ಕ್ರಮದಿಂದಾಗಿ ರೈತರಿಗೆ ಹತ್ತಿರವಲ್ಲಿದ್ದುರೆಯುತ್ತಿದ್ದ ಸೌಲಭ್ಯಗಳು ಮೊರೆಯದಂತಾಗಿ ತೊಂದರೆಗೊಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ ತೊಂದರೆಯನ್ನು ತಪ್ಪಿಸಲು ಹಿಂದೆ ಇದ್ದಂತೆಯೇ ಪಂಚಾಯತಿಗೊಂದು ಸೊಸೈಟಿಯನ್ನು ರಚಿಸಲು ಕ್ರಮ ಕೈಗೊಳ್ಳುವರೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

(ಅ) ಗೊತ್ತಿದೆ.

(ಆ) ಕೆಲವುಕಡೆ ತೊಂದರೆಯಾಗಿರಬದುದೆಂದು ತಿಳಿದಿದೆ.

(ಇ) ಈ ಪ್ರಶ್ನೆಯನ್ನು ನಬಾರ್ಡ್ ಜೊತೆ ಅಲೋಚಿಸಿ, ಮುಂದಿನ ಕ್ರಮ ತೆಗೆದು ಕೊಳ್ಳಲಾಗುವುದು, ಏಕೆಂದರೆ ಬದಲಾವಣೆ ಮಾಡುವಾಗ ಸೊಸೈಟಿಗಳ ಆರ್ಥಿಕ ಸ್ವಾವಲಂಬನೆ ಬಗ್ಗೆಯೂ ಗಮನ ಕೊಡಬೇಕಾಗುತ್ತದೆ.

ವಿಷಯ.—ಹಿರಿಯೂರಿನಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ

೫೭. (೪೬) ಶ್ರೀ ಚೆ. ಎಸ್. ದೊಡ್ಡಮೇಟಿ (ರೋಣ್). — ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಗಿನ ಪಶ್ನೆಗಳಿಗೆ ಉತ್ತರಿಸುವರೆ ?

(ಅ) ಹಿಂದಿನ ಮುಖ್ಯಮಂತ್ರಿಯೊಬ್ಬರು ಹಿರಿಯೂರಿನ ಕುಡಿಯುವ ನೀರಿನ ಸರಬರಾಜು ಯೋಜನೆಗೆ ಶಂಕು ಸ್ಥಾಪತೆಯನ್ನು ನೆರವೇರಿಸಿದ್ದು ನಿಜವೆ ?

(ಆ) ಹಾಗಿದ್ದಲ್ಲಿ ಹಿರಿಯೂರು ನಗರಸಭೆ ಇದರ ಶಂಕು ಸ್ಥಾಪನೆಯ ಸಮಾರಂಭಕ್ಕೆ ಮಾಡಿದ ಖರ್ಚು ಎಷ್ಟು ?

(ಇ) ಇಂತಹ ಸಮಾರಂಭಗಳ ಸಲುವಾಗಿ ಹಿರಿಯೂರು ನಗರಸಭೆ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚು ಖರ್ಚು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯಾ ?

(ಈ) ಹಾಗಿದ್ದಲ್ಲಿ ಸರ್ಕಾರದವರು ಇದರ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

(ಅ) ನಿಜ.

(ಆ) ೨೫೦೦ ಖರ್ಚು ಮಾಡಿದೆ.

(ಇ) ಬಂದಿದೆ.

(ಈ) ಜಿಲ್ಲಾಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳಲು ಅಧಿಕಾರವಿದೆ. ೧೯೬೪ರ ಕರ್ನಾಟಕ ನಗರಸಭೆಗಳ ಕಾಯಿದೆ ಪ್ರಕರಣ ೩೦೮ ರಂತೆ ಚಿತ್ರದುರ್ಗ ಜಿಲ್ಲಾಧಿಕಾರಿಗಳು ಹೆಚ್ಚುವರಿ ಖರ್ಚಾದ ರೂ. ೨೪,೭೫೦, ಎಂಟು ಪುರಸಭಾ ಸದಸ್ಯರಿಂದ ವಸೂಲಿ ಮಾಟಲು ಆಜ್ಞೆಮಾಡಿದ್ದಾರೆ.

ವಿಷಯ.—ಧಾರವಾಡದಲ್ಲಿ ಕಂದಾಯ ಇಲಾಖೆಯ ನಿವೃತ್ತ ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿ ಮಂಜೂರಾಗದೆ ಉಳಿದಿರುವ ಪ್ರಕರಣಗಳು.

೫೩. (೬೭) ಶ್ರೀ ಜೆ. ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪಶ್ನೆಗಳಿಗೆ ಉತ್ತರಿಸುವರೇ ?

(ಅ) ಧಾರವಾಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಸೇವೆಯಿಂದ ನಿವೃತ್ತರಾದ ಮೇಲೂ ಪರಿಷ್ಕೃತ ವೇತನ ಶ್ರೇಣಿ ಮಂಜೂರಾಗದೆ, ಉಳಿದಿರುವ ಪ್ರಕರಣಗಳ ಸಂಖ್ಯೆಯೆಷ್ಟು ? (ತಾಲ್ಲೂಕು ವಾರು ಮಾಹಿತಿ ಒದಗಿಸಬೇಕು)